ದಿನಾಂಕ 25-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಎದುರುದಾರರ ಪರ ಶ್ರೀ. ವಿ.ಬಿ.ಆರ್. ವಕೀಲರಿಂದ

ಮದುವೆಯ ಪೂರ್ವದಲ್ಲಿ ನಾನು ಪಿ.ಯು.ಸಿ.ವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ್ದೆ. ನಂತರ ಧಾರವಾಡದ ಜೆ.ಎಸ್.ಎಸ್. ಮಹಾವಿದ್ಯಾಲಯದಲ್ಲಿ B.Sc ಪದವಿ ಮಾಡಿರುತ್ತೇನೆ. ಮದುವೆಯಾದ ನಂತರ ನಾನು ಬಿ.ಎಸ್ಸಿ ಪದವಿ ಮುಗಿಸಿರುತ್ತೇನೆ ಎಂದರೆ ಸರಿ. ನಾನು I.A.S. ಉತ್ತೀರ್ಣವಾಗಬೇಕೆಂದು ಆಸೆ ಇತ್ತು ಎಂದರೆ ಸರಿಯಲ್ಲ. ಎದುರುದಾರನನ್ನು ನಾನು ನನ್ನ ತಂದೆ ತಾಯಿಯ ಒತ್ತಾಯದ ಮೇರೆಗೆ ಮದುವೆಯಾಗಿರುತ್ತೇನೆ ಎಂದರೆ ಸರಿಯಲ್ಲ.

ಎದುರುದಾರನನ್ನು ಮದುವೆಯಾಗುವ ಪೂರ್ವದಲ್ಲಿ ಆತನ ವಿವರಗಳಾದ ವಯಸ್ಸು ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮತ್ತು ಎದುರುದಾರನ ನಡುವೆ ವಯಸ್ಸಿನ ಅಂತರ ಬಹಳ ಇರುತ್ತದೆ ಎಂದರೆ ಸರಿ. ಮದುವೆ ಸಂದರ್ಭದಲ್ಲಿ ಎದುರುದಾರನು ಪಿ.ಎಸ್.ಐ. ಆಗಿದ್ದನು ಎಂದರೆ ಸರಿ. ನನ್ನ ಮತ್ತು ಎದುರುದಾರನ ಮದುವೆ ಸಂದರ್ಭದಲ್ಲಿ ನಮ್ಮಿಬ್ಬರ ನಡುವೆ 11 ರಿಂದ 12 ವರ್ಷಗಳ ವಯಸ್ಸಿನ ಅಂತರವಿತ್ತು. ನನ್ನ ತಂದೆ ತಾಯಿಯ ಒತ್ತಾಯದ ಮೇರೆಗೆ ಮದುವೆಯಾಗಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ಎದುರುದಾರನಿಗೆ ನಾನು ಪದೇ ಪದೇ ದೂಷಣೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮತ್ತು ಎದುರುದಾರನ ನಡುವೆ ದೈಹಿಕ ಸಾಮರ್ಥ್ಯದಲ್ಲಿ ಬಹಳ ವ್ಯತ್ಯಾಸ ಇರುತ್ತದೆ ಎಂದರೆ ಸರಿ.

ನಾನು ಎದುರುದಾರನನ್ನು ಮದುವೆಯಾಗುವ ಸಂದರ್ಭದಲ್ಲಿ ನನ್ನ ತಂದೆ ತಾಯಿಯ ಹೆಸರಿನಲ್ಲಿ 9 ಎಕರೆ ಜಮೀನು ಇತ್ತು. ನಮ್ಮ ತಂದೆ ತಾಯಿಗೆ 3 ಜನ ಹೆಣ್ಣುಮಕ್ಕಳು, ಒಬ್ಬ ಗಂಡುಮಗ ಇರುತ್ತಾನೆ. ನನ್ನ ತಂದೆಗೆ 9 ಎಕರೆ ಜಮೀನು ಇರುವುದರಿಂದ ಆತನಿಗೆ 1 ಎಕರೆಗೆ 1 ವರ್ಷಕ್ಕೆ ರೂ. 10,000/- ಮಾತ್ರ ಉಳಿಯುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಎಷ್ಟು

ಹಣ ಉಳಿಯುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ತಾಯಿಯ ಮನೆತನದ ವಾರ್ಷಿಕ ಖರ್ಚು ಸದರಿ 9 ಎಕರೆ ಜಮೀನಿನ ಮೇಲೆ ಅವಲಂಬಿತವಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಬಳ್ಳಾರಿಯ ಶ್ರೀ ಚೈತನ್ಯ ಕಾಲೇಜ್‌ನಲ್ಲಿ ಪಿ.ಯು.ಸಿ. ವಿದ್ಯಾಭ್ಯಾಸ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ನನ್ನ ಕಾಲೇಜಿನ ಶುಲ್ಕ ರೂ. 50,000/- ಇತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಸ್ಕಾಲರ್‌ಶಿಪ್‌ನೇದ್ದರಡಿಯಲ್ಲಿ ನಾನು ವಿದ್ಯಾಭ್ಯಾಸ ಮಾಡಿರುತ್ತೇನೆ. ಸ್ಕಾಲರ್‌ಶಿಪ್‌ನಡಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆಗಳಿರುತ್ತವೆ. ಸದರಿ ಸ್ಕಾಲರ್‌ಶಿಪ್‌ನ್ನು ಕಾಲೇಜಿನ ಆಡಳಿತ ಮಂಡಳಿಯಿಂದ ಕೊಟ್ಟಿರುತ್ತಾರೆ.

ನಾನು ಎಸ್.ಎಸ್.ಎಲ್.ಸಿ. ಯವರೆಗೆ ವಿದ್ಯಾಭ್ಯಾಸವನ್ನು ಮಾಂಟೆಸ್ಸರಿ ಪಬ್ಲಿಕ್? ಸ್ಕೂಲ್? ಸಿಂಧನೂರುನೇದ್ದರಲ್ಲಿ ಮಾಡಿರುತ್ತೇನೆ. ಅಲ್ಲಿ ವಿದ್ಯಾಭ್ಯಾಸದ ಶುಲ್ಕ ಸುಮಾರು ರೂ. 20,000/- ಇರಬಹುದು. ನಾನು ನನ್ನ ತಂದೆ ತಾಯಂದಿರಿಗೆ ಹಿರಿಯ ಮಗಳು ಇರುತ್ತೇನೆ. ನನ್ನ ಮತ್ತು ನನ್ನ ಸಹೋದರಿಯರ ಮಧ್ಯೆ ಒಂದೊಂದು ವರ್ಷ ವಯಸ್ಸಿನ ಅಂತರ ಇರುತ್ತದೆ. ನನ್ನ ಮತ್ತು ನನ್ನ ಸಹೋದರ, ಸಹೋದರಿಯರ ವಿದ್ಯಾಭ್ಯಾಸದ ಖರ್ಚು ಪ್ರತಿವರ್ಷ ಸುಮಾರು 1 ಲಕ್ಷ ಆಗುತ್ತಿತ್ತು ಎಂದರೆ ಸರಿಯಲ್ಲ. ಶುಲ್ಕ ಎಷ್ಟು ಆಗುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಕೃಷಿ ಸಾಲ ಮಾಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ಕೆ. ಶ್ರೀನಿವಾಸರವರಿಗೆ ನನ್ನಮದುವೆ ಸಂದರ್ಭದಲ್ಲಲಿ ಸುಮಾರು 7 ಎಕರೆ ಜಮೀನು ಇತ್ತು. ಆತನಿಗೆ ಒಬ್ಬ ಮಗ ಇರುತ್ತಾನೆ. ಆತನು ನನ್ನ ತಾಯಿಯ ಅಣ್ಣನಿರುತ್ತಾನೆ. ಆತನಿಗೆ ನನ್ನ ತಾಯಿ ಮಾತ್ರ ಸಹೋದರಿ ಇರುತ್ತಾಳೆ. ನಮ್ಮ ತಂದೆಗೆ ಮತ್ತು ಶ್ರೀನಿವಾಸ್‌ರವರಿಗೆ ಅವರು ಹೊಂದಿದಂತಹ ಜಮೀನಿನಲ್ಲಿ ಹಣ ಉಳಿಯದೇ ಇರುವುದರಿಂದ ಎದುರುದಾರನಿಗೆ ಮದುವೆಯ ಸಂದರ್ಭದಲ್ಲಿ 25 ತೊಲೆ ಬಂಗಾರ, 25 ಲಕ್ಷ ವರದಕ್ಷಿಣೆ ಹಣವನ್ನು ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಕೊಟ್ಟಿರುವ ಬಗ್ಗೆ ದಾಖಲೆಗಳಿರುತ್ತವೆ. ನನ್ನ ಮಾವ 3 ಎಕರೆ ಜಮೀನನ್ನು ಮಾರಾಟ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ

ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ 3 ನೇ ಕಂಡಿಕೆಯಲ್ಲಿ ಅಸಮಂಜಸವಾದ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಎದುರುದಾರನ ಮದುವೆ ಅರಗಿನಮರಕ್ಯಾಂಪ್‌ಿ ನಮ್ಮ ಮನೆಯ ಮುಂದೆ ಆಗಿರುತ್ತದೆ. ನನ್ನಮತ್ತು ಎದುರುದಾರನ ಮದುವೆ ಆದ ನಂತರ ಮೊದಲನೇ ರಾತ್ರಿಯ ಕಾರ್ಯಕ್ರಮವು ಸಿಂಧನೂರಿನ ಪಿ.ಡಬ್ಲ್ಯೂ.ಡಿ. ಕ್ಯಾಂಪ್‌ಿ ಬಾಡಿಗೆ ಮನೆಯಲ್ಲಿ ಆಗಿರುತ್ತದೆ. ದಿ: 22-08-2018 ರಂದು ನಾನು ಎದುರುದಾರನ ವಿರುದ್ಧ ಗಣಕೀಕೃತ ದೂರನ್ನು ಸಿರುಗುಪ್ಪ ಪೋಲೀಸ್ ಠಾಣೆಯಲ್ಲಿ ದಾಖಲು ಮಾಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಬರವಣಿಗೆ ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದೂರಿನಲ್ಲಿರುವ ಅಂಶಗಳೆಲ್ಲಾ ನಿಜ ಇರುತ್ತವೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.